ತೀರ್ಮಾನ ಆಯಿತು. ಇದರಿಂದ ಮುಕ್ತಿ ಪಡೆಯುವುದಕ್ಕೋಸ್ಕರವಾಗಿ ಹಿಂದೆ ಪ್ರಾಧಿಕಾರದ ಸೆಕ್ಷನ್ 28ಕ್ಕೆ ತಿದ್ದುಪಡಿಯನ್ನು ಮಾಡಲಾಗಿ ಆ ತೆರಿಗೆ ಹಾಕತಕ್ಕಂಥ ಅಧಿಕಾರವನ್ನು ಸಂಪಾದನೆ ಮಾಡಿಕೊಂಡಿದ್ದೇವೆ. ಪ್ರಾಧಿಕಾರಕ್ಕೆ ತಿದ್ದುಪಡಿ ತಂದು ಈ ರೀತಿಯಾದಂತಹ ಒಂದು ತೆರಿಗೆ ಹಾಕತಕ್ಕ ಕ್ರಮ ಏನು ಇತ್ತು, ಅದನ್ನು ವ್ಯಾಲಿಡೇಟ್ ಮಾಡಿಕೊಳ್ಳುವುದಕ್ಕೆ ಅಧಿಕಾರವನ್ನು ಪಡೆದುಕೊಂಡಿದ್ದೇವೆ. ಅದರಿಂದ ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಮತ್ತೆ ಪ್ರಶ್ನೆ ಮಾಡಿದರು. ಈ ರೀತಿಯ ತಿದ್ದುಪಡಿ ಮಾಡಿರತಕ್ಕ ಕಾನೂನು ಸಿಂಧು ಅಲ್ಲ, ಇದನ್ನು ಕಿತ್ತು ಹಾಕಬೇಕೆಂದು ಪ್ರಶ್ನೆ ಮಾಡಿದರು. ಆದರೆ ಸುಪ್ರೀಂ ಕೋರ್ಟ್ ಒಂದು ತೀರ್ಮಾನ ಮಾಡಿತು. ಆ ತಿದ್ದುಪಡಿ ಮಾಡಿದ ತಾರೀಖಿನ ನಂತರ ತೆರಿಗೆಯನ್ನು ಹಾಕತಕ್ಕ ಅಧಿಕಾರ ಸಿಂಧು ಅಲ್ಲ ಎನ್ನತಕ್ಕ ತೀರ್ಮಾನ ಮಾಡಿದರು. ಆದರಿಂದ ಈಗ ನಾವು ಅನಿವಾರ್ಯವಾಗಿ ಕೆಲವು ತಿದ್ದುಪಡಿಗಳನ್ನು ತರಬೇಕಾಯಿತು. ಹಿಂದೆ ಬೆಂಗಳೂರು ಅಭಿವೃದ್ಧಿ, ಪ್ರಾಧಿಕಾರ ಸುಮಾರು 17 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಹಣವನ್ನು ತೆರಿಗೆ ಮುಖಾಂತರ ಸಂಗ್ರಹ ಮಾಡಿದರು. ಅದೇ ಕಾಲಕ್ಕೆ ಆ ಪ್ರದೇಶದ ನಾಗರೀಕ ಸೌಲಭ್ಯಗಳಾದ ಕುಡಿಯುವ ನೀರು ಆಗಿರಬಹುದು, ರಸ್ತೆ ಆಗಿರಬಹುದು. ಬೀದಿ ದೀಪ ಆಗಿರಬಹುದು. ಈ ರೀತಿಯಾದಂತಹ ಎಲ್ಲಾ ನಾಗರೀಕ ಸವಲತ್ತನ್ನು ಕೊಟ್ಟು ಆ ಪ್ರಕಾರವಾಗಿಯೇ ತೆರಿಗೆಯನ್ನು ವಸೂಲು ಮಾಡಿದ್ದೇವೆ. ಈಗ ಈ ತಿದ್ದುಪಡಿಯನ್ನು ನಾವು ತಾರದೇ ಹೋದರೆ ಹಿಂದೆ ವಸೂಲು ಮಾಡಿರತಕ್ಕದ್ದನ್ನು ವ್ಯಾಲಿಡೇಟ್ ಮಾಡತಕ್ಕಂಥ ಒಂದು ಮಸೂದೆಯನ್ನು ನಾವು ತಂದುಕೊಳ್ಳದೇ ಹೋದರೆ ನಾಳೆ ತೆರಿಗೆ ಕೊಟ್ಟವರು ನಮಗೆ ವಾಪಸ್ ಕೊಡಬೇಕೆಂದು ಕೇಳಿದರೆ ಅದನ್ನು ನಾವು ಪಾವತಿ ಮಾಡಬೇಕಾದಂತಹ ಸಂದರ್ಭ ಬರುತ್ತದೆ. ಏಕೆಂದರೆ ಆ ಎಲ್ಲಾ ಪ್ರದೇಶದಲ್ಲಿ ಹಣ ಖರ್ಚು ಮಾಡಿ, ಎಲ್ಲಾ ನಾಗರೀಕ ಸೌಲಭ್ಯಗಳನ್ನು ಪ್ರಾಧಿಕಾರ ಕೊಟ್ಟಿದೆ. ಆದ್ದರಿಂದ ಆ ಕಾರಣಕ್ಕಾಗಿಯೇ; ಅಲ್ಲಿ ತೆರಿಗೆಯನ್ನು ವಸೂಲು ಮಾಡಿರತಕ್ಕಂಥದ್ದು. ಆದ್ದರಿಂದ ಈ ಪ್ರಾಧಿಕಾರದ ಕಾನೂನಿಗೆ ಒಂದು ತಿದ್ದುಪಡಿ ಮಾಡತಕ್ಕಂಥದ್ದು ಹಾಗೆನೇ ಹಿಂದಿನ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಆಕ್ಟ್ ಆಫ್ 1945 ಇತ್ತಲ್ಲಾ, ಇದರ 20ಎ, 20ಬಿ, 20 ಸಿ ಎಂದು ತೆಗೆದುಕೊಂಡು ಈ ಒದು ಪುರಸಭೆಗಳಿಗೆ ಇರಬೇಕಾದಂತಹ ಅಧಿಕಾರವನ್ನು ಸಂಪಾದನೆ ಮಾಡಿಕೊಳ್ಳುವುದಕ್ಕೆ ಆ ಅಧಿಕಾರದ ಬಲದಿಂದ ತೆರಿಗೆಯನ್ನು ಹಾಕುವುದಕ್ಕೆ ಬೇಕಾದಂತಹ ಅಧಿಕಾರವನ್ನು ಪಡೆಯುವುದಕ್ಕೆ ಈ ಒಂದು ತಿದ್ದುಪಡಿಯನ್ನು ತರಬೇಕಾಗಿದೆ. ಅನಿವಾರ್ಯ ಪ್ರಸಂಗದಿಂದ ನಾವು ತಿದ್ದುಪಡಿ ತರಬೇಕಾಯಿತು. ಏಕೆಂದರೆ ತೆರಿಗೆ ಕೊಟ್ಟವರು ಮತ್ತೆ ವಾಪಸ್ ಕೇಳಿದರೆ ಕೊಡಬೇಕಾಗುತ್ತದೆ. ನಾವು ಹಣ ಖರ್ಚು ಮಾಡಿದ್ದೇವೆ, ಸವಲತ್ತನ್ನೂ ಒದಗಿಸಿಕೊಟ್ಟಿದ್ದೇವೆ. ಆ ಕಾರಣ ತೆರಿಗೆದಾರರು ಕೊಟ್ಟಂತಹ ಹಣ ಏನು ಇದೆ, ಅದನ್ನು ನಾವು ಬೇರೆ ಕಾರಣಗಳಿಗಾಗಿ ಬಳಸಿಕೊಂಡಿಲ್ಲ. ಆ ಪ್ರದೇಶದ ಅಭಿವೃದ್ಧಿಗೋಸ್ಕರವೇ ನಾವು ಬಳಸಿಕೊಂಡಿದ್ದೇವೆ. ಆದ್ದರಿಂದ ಮತ್ತೆ ಕೇಳಿದರೆ ವಾಪಸ್ ಕೊಡುವುದಕ್ಕೆ ಸಾಧ್ಯವಾಗದೇ ಇರುವ ಪರಿಸ್ಥಿತಿಯಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ದಯಮಾಡಿ ಇದಕ್ಕೆ ಒಪ್ಪಿಗೆಯನ್ನು ನೀಡಬೇಕೆಂದು ಕೋರುತ್ತೇನೆ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ

ಸದನದಲ್ಲಿ ಮಾತನಾಡುವುದಕ್ಕೆ ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರಿಗೆ ತೊಂದರೆ ಕೊಡುತ್ತಿರುವ ಬಗ್ಗೆ.

+ ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ನಿನ್ನೆ ಇಡೀ ದಿವಸ ಈ ಸದನದಲ್ಲಿ ನನ್ನ ಹಕ್ಕನ್ನು ಚ್ಯುತಿಗೊಳಿಸುವಂತಹ, ನನ್ನ ಹಕ್ಕಿಗೆ ಅಡ್ಡಿ ತರುವಂತಹ, ಒಬ್ಬ ಸದಸ್ಯನಾಗಿ ಈ ಸದನದಲ್ಲಿ ಮಾತನಾಡುವುದಕ್ಕೆ....

ಅಧ್ಯಕ್ಷರು : ತಾವು ಬಿಲ್ ಬಗ್ಗೆ ಏನಾದರೂ ಮಾತನಾಡುತ್ತೀರಾ?

ಶ್ರೀ ವೈ.ಕೆ. ರಾಮಯ್ಯ : ತಮ್ಮಿಂದ ನನಗೆ ಇಷ್ಟೇ ಕೃಪಾಕಟಾಕ್ಷ ಬೇಕಾಗಿರುವುದು. ನನಗೆ ಮಾತನಾಡಲಿಕ್ಕೆ ಈ ಸದನದಲ್ಲಿ ಹಕ್ಕು ಇಲ್ಲ ಎಂದರೆ ಬೇರೆಯವರಿಗೂ ಇಲ್ಲ. ನಾನು ಮಾತನಾಡುವುದನ್ನು ತಡೆಯಲಿಕ್ಕೆ ಬೇರೆಯವರಿಗೆ ಹಕ್ಕು ಇದೆ ಎಂದರೆ ಅವರು ಮಾತನಾಡುವುದನ್ನು ತಡೆಯುವುದಕ್ಕೆ ನನಗೂ ಹಕ್ಕು ಇದೆ. ಇದು ನ್ಯಾಯಸಮ್ಮತವೋ ಅಲ್ಲವೋ ಎನ್ನುವುದನ್ನು ಈ ಸದನ ತೀರ್ಮಾನ ಮಾಡಲಿ. ನಿನ್ನೆ ನಾನು ಮಾತನಾಡುವುದನ್ನು ಏನನ್ನೂ ಕೇಳುವುದಕ್ಕೆ ಅವರಿಗೆ ವ್ಯವಧಾನ ಇಲ್ಲದೇ ನನ್ನನ್ನು ತಡೆದರೆ, ಇವತ್ತು ಅವರು ಮಾತನಾಡುವುದನ್ನು ತಡೆಯಲು ನನಗೆ ಹಕ್ಕು ಇಲ್ಲವಾ? ಈ ವಿಷಯದಲ್ಲಿ ಈ ಸದನ ತೀರ್ಮಾನ ತೆಗೆದುಕೊಳ್ಳಲಿ, ಆಮೇಲೆ ಮುಂದಕ್ಕೆ ಸಭೆ ನಡೆಸಿಕೊಂಡು ಹೋಗಿ, ನಾನು ಅಡ್ಡಿ ಮಾಡುವುದಕ್ಕೆ ಇಷ್ಟ ಇಲ್ಲ. ಏಕೆಂದರೆ ನಿನ್ನೆ ಎಲ್ಲಿಯವರೆಗೆ ಹೋಯಿತು, ನಮ್ಮ ನಡತೆಯನ್ನು ಪ್ರಶ್ನೆ ಮಾಡುವವರೆಗೆ ಹೋಯಿತು. ಒಂದು ನೋಟೀಸನ್ನು ಸೃಷ್ಟಿಸಿ ಅದನ್ನು ಸದನದ ಮುಂದೆ ನಾನು ಇಟ್ಟಿದ್ದೇನೆ ಎನ್ನುವವರೆಗೆ ನನ್ನ ಸ್ನೇಹಿತರು ಆಪಾದನೆ ಮಾಡಿದ್ದಾರೆ. ಅದಕ್ಕೆ ಸ್ಪೀಕರ್ ಅವರೂ ಕೂಡ ಭಾಗಿದ್ದಾರು ಎನ್ನುವವರೆಗೆ ಆಪಾದನೆಯನ್ನು ಮಾಡಿದ್ದಾರೆ.

11.20 ಎ.ಎಂ.

ಆ ನೋಟೀಸನ್ನು ಮೊನ್ನೆ ಕೊಟ್ಟಿರಲಿಲ್ಲ, ನಿನ್ನೆ ತಾನೇ ಕೊಟ್ಟೆವು. ಅದನ್ನು ಸದನದ ಮುಂದೆ ತಂದು ಇಟ್ಟಿದ್ದೇವೆ. ಅದು ಫೋರ್ಜ್ಡ್, ಸೃಷ್ಟಿಸಿದ್ದಾರೆ. It is a connected document. ಎಂದು ಅವರು ಈ ಸದನದಲ್ಲಿ ವ್ಯಾಖ್ಯಾನವನ್ನು ಮಾಡಿದ್ದಾರೆ. ನಿನ್ನೆ ಇಡೀ ದಿವಸ ನನಗಿದ್ದಂಥ ಹಕ್ಕನ್ನು ಅವರು ಕಿತ್ತು ಕೊಂಡಿದ್ದಾರೆ. ನನ್ನ ಪ್ರಶ್ನೆ ಇಷ್ಟೆ. ನಾನು ಒಬ್ಬ ಸದಸ್ಯನಾಗಿ ಈ ಸದನದಲ್ಲಿ ಮಾತನಾಡಲು ಹಕ್ಕಿದೆ, ಅಧಿಕಾರವಿದೆ, ಅವಕಾಶವಿದೆ. ಅದು ಮೊಟಕಾದಾಗ, ಅದು ದಕ್ಕದೇ ಹೋದಾಗ, ಅದನ್ನು ದಕ್ಕಿಸಿಕೊಡಬೇಕಾದುದು, ನಮಗೆ ರಕ್ಷಣೆ ಕೊಡಬೇಕಾದುದು ತಮ್ಮ ಕರ್ತವ್ಯ. ನಿನ್ನೆ, ಆ ದಿಸೆಯಲ್ಲಿ ತಾವೂ ಕೂಡ ವಿಫಲರಾಗಿದ್ದೀರಿ. ನನಗೆ ರಕ್ಷಣೆಯನ್ನು ಕೊಡಲು ತಮ್ಮಿಂದ ಆಗಲಿಲ್ಲ. ಒಬ್ಬ ಸದಸ್ಯ ತನ್ನ ಹಕ್ಕನ್ನು ತಾನು ರಕ್ಷಣೆ ಮಾಡಿಕೊಳ್ಳಲು ಸಾಧ್ಯವಿಲ್ಲದೇ ಹೋದಾಗ, ತಮ್ಮಿಂದಲೂ ಅದನ್ನು ರಕ್ಷಣೆ ಮಾಡಲು ಸಾಧ್ಯವಿಲ್ಲ ಎಂದಾಗ ಆ ಸದಸ್ಯ ಏನು ಮಾಡಬೇಕು? ಈ ಒಂದು ಹೊಸ ಸಮಸ್ಯೆ ಸೃಷ್ಟಿಯಾಗಿದೆ. ದಯಮಾಡಿ ಹೇಳಿ. ನಿಮಗೆ ಮಾತನಾಡಲು ಹಕ್ಕಿಲ್ಲ, ಅವರಿಗೆ ಮಾತ್ರ ಮಾತನಾಡಲು ಹಕ್ಕಿದೆ ಎಂದು ನೀವು ಹೇಳುವುದಾದರೆ ಅವರು ಯಾರು ಬೇಕಾದರೂ ಮಾತನಾಡಲಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಇಲ್ಲದಿದ್ದರೆ, ನನಗೂ ಮಾತನಾಡಲು ತಾವು ಅವಕಾಶ ಕೊಡಬೇಕಾಗುತ್ತದೆ. ಆಮೇಲೆ ಅವರು ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ. ಕೊನೆಯ ಪಕ್ಷ ನಾನು ಏನು ಹೇಳುತ್ತೇನೆ ಎನ್ನುವುದನ್ನಾದರೂ, ನಾನು ಈ ದೇಶದ ವಿಷಯ ಹೇಳುತ್ತಿದ್ದೇನೆಯೇ ಅಥವಾ ಯಾವುದೋ ಒಂದು ಪಕ್ಷವನ್ನು ವೈಭವೀಕರಣ ಮಾಡುತ್ತಿದ್ದೇನೆಯೇ, ಕಾಂಗ್ರೆಸ್ ಪಕ್ಷದ ಬಗ್ಗೆ ಯಾರ್ಯಾರು ಏನೇನು ಹೇಳಿದ್ದಾರೆ ಎನ್ನುವುದನ್ನು ಓದುತ್ತಿದ್ದೇನೆಯೇ ಅಥವಾ ಈ ದೇಶದಲ್ಲಿ ಆಗುವಂತಹ ಜನಸಾಮಾನ್ಯರ ಸಮಸ್ಯೆಗಳನ್ನು

ವೈಭವೀಕರಣ ಮಾಡುತ್ತೇನೆಯೇ ಎನ್ನುವುದನ್ನು ಕೇಳಲು ಸಹಾ ವ್ಯವಧಾನ ಇಲ್ಲದೇ, ನಿನ್ನೆ ನನ್ನ ಸ್ನೇಹಿತರು ನಾನು ಮಾತನಾಡದ ಹಾಗೆ ನನ್ನನ್ನು ತಡೆದರೆ ಅದನ್ನು ತಾವೂ ಕೂಡ ರಕ್ಷಣೆ ಮಾಡಲಾರದಂಥ ಪರಿಸ್ಥಿತಿಯಲ್ಲಿದ್ದರೆ ನಾವು ಏನು ಮಾಡಬೇಕು? ಈ ಪರಿಸ್ಥಿತಿ ಈ ದಿವಸ ಒಬ್ಬ ಸದಸ್ಯ ರಾಮಯ್ಯನಿಗೆ ಬಂದಿದೆ. ನಾಳೆ ಮತ್ತೊಬ್ಬರಿಗೆ ಬರುತ್ತದೆ, ನಂತರ ಮಗದೊಬ್ಬರಿಗೆ ಬರುತ್ತದೆ. ಈ ರೀತಿಯಾದಾಗ ನಾವು ಏನು ಮಾಡಬೇಕು?

ಅಧ್ಯಕ್ಷರು : ಮಾನ್ಯ ರಾಮಯ್ಯನವರೆ, ತಾವು ಹೇಳಿದ್ದು ಆಯಿತು. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ರಾಮಯ್ಯನವರು ಇದು. ನಿನ್ನೆ ಸದನ ಅಡ್ಜರ್ನ್ ಆಯಿತು, ನಾವು ಹೋದೆವು. ಇವತ್ತು ಅಜೆಂಡಾದಲ್ಲಿ ಆ ವಿಷಯ ಇಲ್ಲ. ಅದು ಅಜೆಂಡಾದಲ್ಲಿ ಬರಬೇಕಾಗಿತ್ತು. ಇದು ಮುಗಿದಿದೆಯೋ, ಇಲ್ಲವೋ ಎಂದು ತಮ್ಮಿಂದ ತೀರ್ಮಾನ ಆಗಬೇಕಾಗಿತ್ತು. ಅದನ್ನು ಮಾನ್ಯ ರಾಮಯ್ಯನವರು ಹೇಳುತ್ತಿದ್ದಾರೆ. ಈಗ ತಾವು ತಿದ್ದುಪಡಿ ವಿಧೇಯಕಗಳನ್ನು ತೆಗೆದುಕೊಂಡಿದ್ದೀರಿ. ಈ ಮಧ್ಯೆ ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡುತ್ತಿದ್ದಾರೆ. ಅವರು ಮಾತನಾಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಅದು ತಮಗೆ ಬಿಟ್ಟಿರತಕ್ಕಂಥಾದ್ದು. ನಿನ್ನೆ ಆದಂಥ ವಿಚಾರ ಮುಕ್ತಾಯವಾಗಿದೆಯೋ, ಇಲ್ಲವೋ ಎನ್ನುವುದರ ಬಗ್ಗೆ ತಮ್ಮ ತೀರ್ಮಾನವಾಗಬೇಕು.

ಅಧ್ಯಕ್ಷರು : ರಾಮಯ್ಯನವರೇ, ತಮ್ಮದು ಮಾತನಾಡಿ ಆಯಿತೇ? ತಾವು ದಯವಿಟ್ಟು ಕುಳಿತುಕೊಳ್ಳುತ್ತೀರಾ?

ಶ್ರೀ ವೈ.ಕೆ. ರಾಮಯ್ಯ : ನನ್ನ ಸ್ನೇಹಿತರ ಮಟ್ಟಿಗೆ ಅದು ಮುಕ್ತಾಯ ಆಗಿರಬಹುದು. ಆದರೆ ನನ್ನ ಮಟ್ಟಿಗೆ ಅದು ಇವತ್ತು ಪ್ರಾರಂಭವಾಗುತ್ತದೆ.

ಅಧ್ಯಕ್ಷರು : ತಾವು ಹೇಳಿದ್ದು ನನಗೆ ಅರ್ಥವಾಯಿತು. ತಾವು ಹೇಳಿದ್ದು ನನಗೆ ಮನದಟ್ಟಾಗಿದೆ.

ಶ್ರೀ ವೈ.ಕೆ. ರಾಮಯ್ಯ : ಅವರಿಗೆ ಮುಕ್ತಾಯವಾಗಿದೆ. ನನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳಲು ನಾನು ಯಾವ ತ್ಯಾಗ ಮಾಡಲೂ ಸಿದ್ಧನಾಗಿದ್ದೇನೆ. ನನ್ನ ಆತ್ಮ ಗೌರವವನ್ನು ಕಾಪಾಡಿಕೊಳ್ಳಲಿಕ್ಕೆ ಯಾವ ಬೆಲೆ ಬೇಕಾದರೂ ತೆರಲು ನಾನು ಸಿದ್ಧನಾಗಿದ್ದೇನೆ. ನನಗೆ ಅವಮಾನವಾಗಿದೆ, ನನ್ನ ಹಕ್ಕಿಗೆ ಚ್ಯುತಿಯಾಗಿದೆ. ನಿನ್ನೆ ಇಡೀ ದಿವಸ ಒಬ್ಬ ಸದಸ್ಯನನ್ನು ಮಾತನಾಡದ ಹಾಗೆ ತಡೆದಿದ್ದಾರೆ. ನನಗೆ ಇದರ ಬಗ್ಗೆ ಒಂದು ನಿರ್ಧಾರವಾಗಬೇಕು.

(ಗೊಂದಲ)

MR. SPEAKER: I have to find some solution. I have permitted Mr. Ramaiah to speak. Don't interrupt. ಕಾನೂನು ಪ್ರಕಾರ ಹೋಗಬೇಕೆಂದು ನನಗೆ ಹೇಳುತ್ತಾರೆ ಸುಮ್ಮನೆ ಇರಿ. I have permitted Mr. Ramaiah to speak. If you want I will give you half-an-hour time.

ಶ್ರೀ ಜಗದೀಶ್ ಶೆಟ್ಟರ್ : ಅವರಿಗೂ ಅವಕಾಶ ಕೊಡಿ. ಸನ್ಮಾನ್ಯ ರಾಮಯ್ಯನವರಿಗೂ ಅವಕಾಶ ಕೊಡಿ. ಶೂನ್ಯವೇಳೆಯಲ್ಲಿ ಅವಕಾಶ ಕೊಡಿ.

MR. SPEAKER: During the day I am going to take up that issue also. I have permitted Mr. Ramaiah. I have not permitted you Mr. Shivananda Patil. Let him finish first. I will answer to Mr. Ramaiah.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರ ಬಗ್ಗೆ ನನಗೆ ಅತ್ಯಂತ ಪರಿಪೂರ್ಣವಾಗಿರತಕ್ಕಂಥ ಗೌರವವಿದೆ. ಒಬ್ಬ ವ್ಯಕ್ತಿ ಒಂದು ಕ್ಷೇತ್ರದಿಂದ ಗೆದ್ದು ಬರಬೇಕಾದರೆ ಅವನಿಗೆ ಇರುವಂಥ ಕಷ್ಟಗಳೇನು, ಅವನ ಸಮಸ್ಯೆಗಳೇನು, ಒಬ್ಬ ಶಾಸಕನಾಗಿ ಈ ಸದನಕ್ಕೆ ಬರಬೇಕಾದರೆ ಅವನು ಮಾಡಬೇಕಾದ ತ್ಯಾಗಗಳೇನು ಇವುಗಳಿಲ್ಲದರ ಬಗ್ಗೆ ನನಗೆ ಅರಿವಿದೆ. ನನಗೆ ಯಾರ ಬಗ್ಗೆಯೂ ಅಗೌರವವಿಲ್ಲ. ನನ್ನ ಪ್ರಶ್ನೆ ಇಷ್ಟೆ. ನಾಳೆ ಈ ಸದನದಲ್ಲಿ ಒಬ್ಬ ಸದಸ್ಯ ತನಗೆ ವಿಧಿವತ್ತಾಗಿ ಬಂದಂಥ ಹಕ್ಕನ್ನು ಪ್ರತಿಪಾದನೆ ಮಾಡಲು ಅವಕಾಶ ಮಾಡಿಕೊಂಡೇ ಇದ್ದಾಗ, ಅದನ್ನು 4 ಜನರೋ, 10 ಜನರೋ ತಡೆದಾಗ ನನಗೆ ದಾರಿ ಏನು? ಅವರ ತಡೆಯನ್ನು ಹೊಡೆದು ನನ್ನ ಹಕ್ಕನ್ನು ರಕ್ಷಿಸುವಂತಹ ಪರಿಸ್ಥಿತಿ ನಿನ್ನೆಯ ದಿವಸ ಸಭಾಧ್ಯಕ್ಷರಿಂದಲೂ ಆಗಲಿಲ್ಲ. ಈಗ ನಾನು ಏನು ಮಾಡಬೇಕು?

ಅಧ್ಯಕ್ಷರು : ತಾವು ಇದನ್ನು ನಾಲ್ಕನೆಯ ಬಾರಿ ಹೇಳುತ್ತಿದ್ದೀರಿ. ರಿಪೀಟ್ ಮಾಡಬೇಡಿ. ನನಗೆ ಅರ್ಥವಾಗಿದೆ. ನಿಮ್ಮ ಮನಸ್ಸಿನ ನೋವು ನನಗೆ ಮನದಟ್ಟಾಗಿದೆ. ತಮಗೆ ಅಷ್ಟು ತಾನೇ ಬೇಕಾಗಿರುವುದು. ಅದನ್ನು ನನಗೆ ಬಿಡಿ. ಈಗ ನಾನು ಉತ್ತರ ಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಾರ್ಥನೆ ಇಷ್ಟೇ. ಇಂಥ ಒಂದು ಪರಿಸ್ಥಿತಿ ಬಂದಾಗ ಒಂದು ಸೂಚನಾ ಪತ್ರವನ್ನು ರಾಜಕೀಯ ಕಾರಣಕ್ಕಾಗಿ, ಸೃಷ್ಟಿ ಮಾಡಿ ಈ ಸದನದ ಮುಂದೆ ಇಟ್ಟಿದ್ದಾರೆ ಎನ್ನುವ ಆಪಾದನೆ ಬಂದಾಗ ಅದನ್ನು ಸಹಿಸಿಕೊಂಡು ಸುಮ್ಮನಿರಲು ನಾವ್ಯಾರೂ ದೇವರಿಗೆ ಸಮಾನರಲ್ಲ. ಅವರು ನಿನ್ನೆ ನಾನು ಮಾತನಾಡಲು ಅಡ್ಡಿ ಮಾಡಿದ್ದಾರೆ. ಅವರು ಮಾತನಾಡುವಾಗ ನಾನು ಅಡ್ಡಿ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ತಾವು ಹೇಳಿದ್ದೀರಲ್ಲಾ. ತಾವು ದಯವಿಟ್ಟು ಕುಳಿತುಕೊಳ್ಳಿ. ನನಗೆ ಮಾತನಾಡಲು ಒಂದು ನಿಮಿಷ ಸಮಯ ಕೊಡಿ.

(ಈ ಹಂತದಲ್ಲಿ ಸದಸ್ಯರಾದ ಕೆ.ಎನ್. ಸುಬ್ಬಾರೆಡ್ಡಿಯವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು : ಮಾನ್ಯ ರೆಡ್ಡಿಯವರೇ, ನಾನು ನಿಮ್ಮನ್ನು ಕರೆದಿಲ್ಲ. I have not called you Mr. Reddy. You please take your seat. I will answer to Mr. Ramaiah's question. Afterwards, you can talk.

ರಾಮಯ್ಯನವರು ಹೇಳಿದ್ದು ಗಂಭೀರವಾದ ಪ್ರಶ್ನೆಯಾಗಿದೆ. ಅದರ ಬಗ್ಗೆ ನಾನೊಬ್ಬನೇ ನಿರ್ಣಯ ತೆಗೆದುಕೊಳ್ಳಲು ಆಗುವುದಿಲ್ಲ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರನ್ನು ಕರೆಸಿ, ಅವರ ಜೊತೆ ಇವತ್ತೇ ಮಾತನಾಡಿ, ಇವತ್ತು ಸಂಜೆಯೊಳಗೆ ಅವರ ವಿಷಯವನ್ನು ಪುನಃ ತೆಗೆದುಕೊಳ್ಳಲು ನಾನು ಏರ್ಪಾಡು ಮಾಡುತ್ತೇನೆ. ಈ ವಿಷಯ ಗಂಭೀರವಾಗಿದೆ. ಇದನ್ನು ಇಷ್ಟಕ್ಕೇ ಬಿಟ್ಟರೆ ಆಗುವುದಿಲ್ಲ. ಇವರು ಎದ್ದಾಗ ಅವರು ಗಲಾಟೆ ಮಾಡುವುದು, ಅವರು ಎದ್ದಾಗ ಇವರು ಗಲಾಟೆ ಮಾಡುವುದು ಇಷ್ಟೇ ಆಗುತ್ತದೆ. ಇದೇನು ಸಭೆಯೋ ಅಥವಾ ಸಂತೆಯೋ ಎಂದು ನನಗೆ ಅರ್ಥವಾಗುತ್ತಿಲ್ಲ.

(ಈ ಹಂತದಲ್ಲಿ ಸದಸ್ಯರಾದ ಮಾನ್ಯ ಎಸ್. ಶಿವಣ್ಣನವರು ಎದ್ದು ನಿಂತರು)

ಅಧ್ಯಕ್ಷರು : ನಾನು ಪೂರ್ಣ ಮಾಡುವವರೆಗೆ ಸುಮ್ಮನಿರಿ. ದಯವಿಟ್ಟು ನಿಮ್ಮ ಜಾಗದಲ್ಲಿ ಕುಳಿತುಕೊಳ್ಳಿ. ಅಧ್ಯಕ್ಷರು ಎದ್ದುನಿಂತು ಮಾತನಾಡುತ್ತಿರುವಾಗ ನೀವು ನಿಂತುಕೊಳ್ಳಕೂಡದು. ಶಿವಣ್ಣನವರೇ, ದಯವಿಟ್ಟು ಕುಳಿತುಕೊಳ್ಳಿ. ಇದೇಕೆ ಹೀಗೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅಧ್ಯಕ್ಷರಾದ ನಾನು ಮಾತನಾಡುತ್ತಿದ್ದೇನೆ. ನಾನು ಮಾತನಾಡುವಾಗ ನೀವ್ಯಾರೂ ಎದ್ದು ನಿಂತುಕೊಳ್ಳಬಾರದು. ಮಾತನಾಡಬಾರದು. ಸ್ವಲ್ಪ ಗೌರವ ಕೊಡಿ. ಇಲ್ಲಿ ಕೋಪದ ಪ್ರಶ್ನೆಯೇ ಇಲ್ಲ. ದಯವಿಟ್ಟು ಕೇಳಿ ಇವತ್ತು ಸಂಜೆಯೊಳಗೆ ಎರಡೂ ಕಡೆಯ ನಾಯಕರುಗಳನ್ನು ಕರೆದು, ಇಂಥ ಸಂದಿಗ್ಧ ಪರಿಸ್ಥಿತಿ ಬಂದಾಗ ಏನು ಮಾಡಬೇಕು ಎನ್ನುವ ಬಗ್ಗೆ ಮಾತನಾಡುತ್ತೇನೆ. ಸಂಜೆಯೊಳಗೆ ಆ ವಿಷಯವನ್ನು ತೆಗೆದುಕೊಳ್ಳುತ್ತೇನೆ. ಈಗ ದಯವಿಟ್ಟು ಪುನಃ ಅದನ್ನು ರೈಸ್ ಮಾಡುವುದು ಬೇಡ. ಇದು ನನ್ನ ಮನವಿ. ಶೂನ್ಯವೇಳೆಯಲ್ಲಾಗಲೀ ಅಥವಾ ಪ್ರಶ್ನೋತ್ತರ ವೇಳೆ ಆದ ಮೇಲಾದರೂ ನಿಮ್ಮ ವಿಷಯಕ್ಕೆ ಅನುಮತಿ ಕೊಡಲು ನಾನು ಏರ್ಪಾಡು ಮಾಡುತ್ತೇನೆ. ಅಗತ್ಯವಿದ್ದರೆ ಏಳು ಗಂಟೆಯವರೆಗೂ ಕುಳಿತುಕೊಳ್ಳೋಣ. ಸುರೇಶ್ ಕುಮಾರ್‌ರವರೇ, ಈಗ ನೀವು ಮಾತನಾಡಿ. ರಾಮಯ್ಯನವರೇ, ನಾನು ನಿಮಗೆ ಪ್ರಾಮಿಸ್ ಮಾಡಿದ್ದೇನೆ, ದಯವಿಟ್ಟು ಮತ್ತೆ ನೀವು ಡಿಸ್ಟರ್ಬ್ ಮಾಡಬೇಡಿ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಒಂದು ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದೆ.

(ಗೊಂದಲ)

ಅಧ್ಯಕ್ಷರು : ಸಂಜೆಯೊಳಗೆ ರಾಮಯ್ಯನವರ ವಿಚಾರವನ್ನು ತೆಗೆದುಕೊಳ್ಳುತ್ತೇವೆ. ಅದರ ಜೊತೆಯಲ್ಲೇ ನಿಮ್ಮ ವಿಚಾರವನ್ನೂ ತೆಗೆದುಕೊಳ್ಳೋಣ. ಈಗ ದಯವಿಟ್ಟು ನೀವು ಕುಳಿತುಕೊಳ್ಳಿ.

(ಗೊಂದಲ)

ರಾಮಯ್ಯನವರ ವಿಷಯ ಬಂದಾಗ ಇದನ್ನೂ ತೆಗೆದುಕೊಳ್ಳೋಣ. ಇದನ್ನು ಸೆಪರೇಟ್ ಆಗಿ ತೆಗೆದುಕೊಳ್ಳಲು ಆಗುವುದಿಲ್ಲ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಬರೀ ರಾಜಕೀಯ ಮಾಡುವುದರಲ್ಲೇ ಈ ಸದನದ ಸಮಯ ಹೋಗುತ್ತಿದೆ. ನಾನು ರಾಜಕೀಯ ಮಾಡುತ್ತಿಲ್ಲ. ಸದನ ಹೇಗೆ ನಡೆಯಬೇಕು ಎಂದು ನಿರ್ಣಯವಾಗಬೇಕು.

MR. SPEAKER: I have told you people. We will take up that issue before this evening.

ಶ್ರೀ ಬಿ.ಎನ್. ಬಚ್ಚೇಗೌಡ : ಇವತ್ತು ಅವರು ಏಕೆ ಸುಮ್ಮನಿದ್ದಾರೆ ಎಂದರೆ ....

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೇ, ಈಗ ವಿಷಯ ಬೇಕಾಗಿಲ್ಲ. ನಾನು ನಿಮಗೆ ಅವಕಾಶ ಕೊಟ್ಟಿಲ್ಲ. ಸುರೇಶ್ ಕುಮಾರ್‌ರವರೇ, ನೀವು ಮಾತನಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಇವತ್ತಿನ ಪತ್ರಿಕೆಯಲ್ಲಿ ಕಾಂಗ್ರೆಸ್‌ನ ನಾಯಕರಾದ ಮನಮೋಹನ್ ಸಿಂಗ್, ಎಸ್. ಬಂಗಾರಪ್ಪ ಮಾರ್ಗರೆಟ್ ಆಲ್ವಾ, ಪುಟ್ಟಸ್ವಾಮಿಗೌಡ, ಮೋಟಮ್ಮ ಇವರೆಲ್ಲರಿಗೂ ಪೆಟ್ರೋಲ್ ಬಂಕ್ ಅನ್ನು ಕೊಟ್ಟಿದ್ದಾರೆ. ಇಂಥ ಅನಿಷ್ಟ ಪದ್ಧತಿಯನ್ನು

ತಂದವರು ಕಾಂಗ್ರೆಸ್‌ನವರು. ಅದಕ್ಕಾಗಿ ಇವತ್ತು ಕಾಂಗ್ರೆಸ್‌ನವರು ಬಾಯಿಮುಚ್ಚಿಕೊಂಡು ಸುಮ್ಮನೆ ಕುಳಿತಿದ್ದಾರೆ. ಇವತ್ತು ಆ ಕಡೆಯವರು ಮಾತನಾಡಲಿ. ಅವರದೆಲ್ಲಾ ಇವತ್ತು ಬಂದಿಲ್ಲವೇ?

(ಗೊಂದಲ)

ಅಧ್ಯಕ್ಷರು : ಐದಾರು ಜನರು ಎದ್ದು ಮಾತನಾಡುತ್ತಿದ್ದಾರೆ. ಬರೆದುಕೊಳ್ಳಬೇಡಿ.

(ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿರುವುದಿಲ್ಲ)

(ಗೊಂದಲ)

ಅಧ್ಯಕ್ಷರು : 5-6 ಜನ ಸದಸ್ಯರು ಎದ್ದು ನಿಂತು ಮಾತನಾಡಿದರೆ, ಬರೆದುಕೊಳ್ಳಬೇಡಿ. Don't take down. Don't take down.

(ಗೊಂದಲ)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. Don't take down.

ಈ ಪ್ರಶ್ನೆ ಕೂಡ ಬರುತ್ತದೆ. 7-8 ಜನರು ಮಾತನಾಡಿದಾಗ ನಾವೇನು ಮಾಡಬೇಕು ಎನ್ನುವುದನ್ನೂ, ಎಸ್.ಎಸ್. ಪಾಟೀಲರು ಒಂದು ಕೋಟಿ ರೂಪಾಯಿ ಖರ್ಚಾಯಿತೆಂದು ಕೇಳಿದರು ಆ ವಿಚಾರ ಮತ್ತು ಮಾನ್ಯ ರಾಮಯ್ಯನವರ ಪ್ರಶ್ನೆ ಎಲ್ಲವನ್ನೂ ನಾವು ಡಿಸ್ಕಸ್ ಮಾಡಬೇಕು. All the questions we have to take up.

(ಗೊಂದಲ)

MR. SPEAKER: Don't take down.

(ಗೊಂದಲ)

ನಮಗೆ ಬೇಕಾಗಿಲ್ಲ. I am not allowing you people to talk. ಬೇಕಾದರೆ ಮಧ್ಯಾಹ್ನ ನೋಡೋಣ. After the question hour. ಜೀರೋ ಹವರ್‌ನಲ್ಲಿ ನಾನು ಅಲೋ ಮಾಡುತ್ತೇನೆ. I will allow during the Zero Hour.

(ಗೊಂದಲ)

MR. SPEAKER: Don't take down.

(ಗೊಂದಲ)

MR. SPEAKER: I will allow you during the Zero Hour.

(ಗೊಂದಲ)

MR. SPEAKER: Today, after the question hour, I will allow. ಶೂನ್ಯ ವೇಳೆಯಲ್ಲಿ ಅಲೋ ಮಾಡುತ್ತೇನೆ. I will allow during the Zero Hour.

(ಗೊಂದಲ)

MR. SPEAKER: Don't take down.

(ಗೊಂದಲ)

MR. SPEAKER: I will allow.

(ಗೊಂದಲ)

MR. SPEAKER: I will allow. Let us go according to agenda. ಅಜೆಂಡಾ ಪ್ರಕಾರ ಹೋಗಬೇಕು.

(ಗೊಂದಲ)

ಅಧ್ಯಕ್ಷರು : ಅವರೇನು ಹೇಳಿದರೆಂದು ಕೇಳಿದೆ ಅಷ್ಟೇ, No. I have not allowed him. ರಾಮಯ್ಯನವರಿಗೆ ನಾನು, ಮಧ್ಯಾಹ್ನ, ಸಂಜೆಯೊಳಗೆ ನಿಮ್ಮ ವಿಷಯವನ್ನು ತೆಗೆದುಕೊಳ್ಳೋಣವೆಂದು ಹೇಳಿದೆ.

(ಗೊಂದಲ)

MR. SPEAKER: Don't take down.

(ಗೊಂದಲ)

MR. SPEAKER: I am not allowing anybody to speak.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು 15 ನಿಮಿಷ ಕಾಲ ಮುಂದೂಡುತ್ತಿದ್ದೇನೆ.

(ಸದನವು ಬೆಳಿಗ್ಗೆ 11.34 ಗಂಟೆಗೆ ಮುಂದೂಡಲ್ಪಟ್ಟು, ಪುನಃ 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

ಸದನವು ಮತ್ತೆ 12-30ಕ್ಕೆ ಸಮಾವೇಶಗೊಂಡಿತು.

(ಸಭಾಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪನವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

9. ಶಾಸನ ರಚನೆ

ವಿಷಯ: 2002ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕದ ಮೇಲಿನ ಚರ್ಚೆ.

ಅಧ್ಯಕ್ಷರು : ಮಾನ್ಯ ಸುರೇಶ್ ಕುಮಾರ್ ಮಾತನಾಡುವುದಕ್ಕೆ ಮೊದಲು, ನಾವು ಒಳಗಡೆ ಒಂದು ಅಂಡರ್‌ಸ್ಟಾಂಡಿಂಗ್‌ಗೆ ಬಂದಿದ್ದೇವೆ. ಅದರ ಪ್ರಕಾರ ಸುರೇಶ್ ಕುಮಾರ್ ರವರು ಮಾತನಾಡುತ್ತಾರೆ. ನಂತರ ಮುಂದಿನ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ. Now BDA Bill. We must appreciate the boldness of the Commissioner who is making BDA to earn of rupees crores, We must appreciate. Such officers should be given encouragement. ನೂರಾರು ಕೋಟಿ ರೂ.ಗಳನ್ನು ಬಿ.ಡಿ.ಎ. ತಂದುಕೊಡುತ್ತದೆ. ಅಪ್ರೀಷಿಯೇಟ್ ಮಾಡಬೇಕೆಂದು ನಾನೇ ಮೆನ್‌ಷನ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ತಾವು ಪ್ರಸ್ತಾಪ ಮಾಡಿದಿರಿ ಎಂದು ನಾನು ಹೇಳುತ್ತಿದ್ದೇನೆ. ಬಿ.ಡಿ.ಎ. ಕಮೀಷನರ್ ಈ ಅನ್ ಆಥರೈಸ್ಡ್ ಕಟ್ಟಡಗಳ ಬಗ್ಗೆ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಮೊನ್ನೆ ನಾನು ಡೆಲ್ಲಿಗೆ ಹೋದಂಥ ಸಂದರ್ಭದಲ್ಲಿ, ಕೆಲವು ಪ್ರಮುಖರು ಕೇಳಿದರು. ಬೆಂಗಳೂರಿನಲ್ಲಿ ಅನ್ ಆಥರೈಸ್ಡ್ ಬಗ್ಗೆ ಹೇಗೆ ಎಂದರು. ಬೆಂಗಳೂರಿನಲ್ಲಿ ಬಹಳ ಚೆನ್ನಾಗಿ ನಡೆಯುತ್ತಿದೆ, ಇದೆಲ್ಲಾ ಕಮೀಷನರದ್ದು ಎಂದು ಹೇಳಿದೆ. ಅದಕ್ಕೆ, ಅವರೂ ಅಪ್ರೀಷಿಯೇಟ್ ಮಾಡಿದರು. ಮತ್ತೊಂದು ಕಾಷನ್ ತೆಗೆದುಕೊಳ್ಳುವಂಥಾದ್ದು, ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆದಮೇಲೆ ಅದನ್ನು ಡೆಮಾಲಿಷ್ ಮಾಡುವುದು, ಒಂದು ಹಂತ. ಯಾರು ಇಲ್ಲೀಗಲ್ ಮಾಡುತ್ತಾರೆ, ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಒಂದು. ಮತ್ತೊಂದು ಆ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಬರದ ರೀತಿಯಲ್ಲಿ ಪ್ರಿವೆಂಟಿವ್ ಮೆಷರ್ಸ್